<u>ದಿನಾಂಕ 30-08-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :</u>

ಇದೇ ದಾವಾ ಆಸ್ತಿಯ ಕುರಿತು ಪ್ರತಿವಾದಿಯರ ವಿರುದ್ಧ ಮೂಲ ದಾವಾ ನಂ.118/2001 ನ್ನು ಸಲ್ಲಿಸಿದ್ದೇನೆ ಅಂದ್ರೆ ನಿಜ. ಸಾಕ್ಷಿ ಮುಂದುವರೆದು 26 ಗುಂಟೆ ನನಗೆ ಸೇರಿದ್ದು ಎಂದು ಪ್ರತಿವಾದಿಯರು ಪ್ರಮಾಣಪತ್ರ ಸಲ್ಲಿಸಿದ್ದಾರೆ ನಾನು ಸಲ್ಲಿಸಿದ ದಾವೆಯನ್ನು ನ್ಯಾಯಾಲಯದವರು ವಜಾಗೊಳಿಸಿದ್ದಾರೆ ಅಂದ್ರೆ ನಿಜ. ಸಾಕ್ಷಿಯು ಈಗಾಗಲೇ ವಿಭಾಗ ಆಗಿದೆ ಅಂತಾ ಹೇಳಿ ವಜಾ ಮಾಡಿದ್ದಾರೆ. ಮೂಲ ದಾವಾ ನಂ.118/2001 ರ ಆದೇಶದ ವಿರುದ್ಧ ನಾನು ಮೇಲ್ಮನವಿ ಮಾಡಿರುವುದಿಲ್ಲಾ. ಈ ದಾವಾ ಸಲ್ಲಿಸಿದ್ದೇನೆ. ಮೂಲ ದಾವಾ ನಂ.

118/2001 ರ ದಾವೆಯಲ್ಲಿ ನನ್ನ ಸಾಕ್ಷಿ ವಿಚಾರಣೆ ಆಗಿರುವುದಿಲ್ಲಾ. ಮೂಲ ದಾವಾ ನಂ.118/2001 ರಲ್ಲಿ ಸಾಕ್ಷಿ ವಿಚಾರಣೆ ಆಗಿಲ್ಲಾ ಅಂತಾ ನಾನು ಮೇಲ್ಮನವಿ ಮಾಡಿರುವುದಿಲ್ಲಾ. ದಿನಾಂಕಃ 20-07-2006 ರಂದು ಆದ ತೀರ್ಪು ಮತ್ತು ಡಿಕ್ರಿಯನ್ನು ನಾನು ನ್ಯಾಯಾಲಯ ದಿಂದ ಪಡೆದುಕೊಂಡಿರುವುದಿಲ್ಲಾ. ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನಕ್ಕೆ ತೊಂದರೆ ಮಾಡಿ ನನಗೆ ಹೊಡಿ ಬಡಿ ಮಾಡಿದ್ದರಿಂದ ನಾನು ದಾಖಲೆಗಳನ್ನು ತೆಗೆಸಿ ನೋಡಿದಾಗ ಪ್ರತಿವಾದಿ ಯರು ತಮ್ಮ ಹೆಸರಿಗೆ ದಾವಾ ಆಸ್ತಿಯನ್ನು ಮಾಡಿಕೊಂಡಿದ್ದಾರೆ ಅಂತಾ ನನಗೆ ಗೊತ್ತಾಗಿದೆ. ಪ್ರತಿವಾದಿಯರು 10-15 ವರ್ಷಗಳ ಹಿಂದೆ ನನ್ನ ಸ್ವಾಧೀನಕ್ಕೆ ತೊಂದರೆ ಮಾಡಿದ್ದಾರೆ. ನಾನು ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ತೆಗೆಸಿ ನೋಡಿರುವುದಿಲ್ಲಾ.

ಈ ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟು ಬರೆಸಿದ್ದೇನೆ. ನಾನು ಹಿಂದಿನ ದಾವೆಯ ಬಗ್ಗೆ ವಕೀಲರಿಗೆ ಹೇಳಿರುವುದಿಲ್ಲಾ. ನಾನು ನನ್ನ ವಾದ ಪತ್ರದ ಖಂಡಿಕೆ-14 ರಲ್ಲಿ ಹೇಳಿ ಬರೆಸಿದ್ದರೂ ಸಹ ಬರೆಸಿಲ್ಲಾ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲಾ. ನಮ್ಮ ತಂದೆಯ ಜೀವಿತ ಕಾಲದಲ್ಲಿ ನಮ್ಮ ತಂದೆ ಮತ್ತು ಆತನ ಸಹೋದರರು ಸೇರಿ ದಿನಾಂಕಃ 13-03-1967 ರಂದು ಖರೀದಿಗೆ ಕೊಟ್ಟಿದ್ದಾರೆ ಅಂದ್ರೆ ಸರಿಯಲ್ಲಾ. ಮಾರಾಟ ಮಾಡಿ ಬಂದ ಹಣವನ್ನು ನಮ್ಮ ತಂದೆ ಮತ್ತು ಆತನ ಸಹೋದರರು ಸೇರಿ ಹಂಚಿಕೆ ಮಾಡಿಕೊಂಡಿದ್ದಾರೆ ಅಂದ್ರೆ ಸರಿಯಲ್ಲಾ. ಸದರಿ ಕ್ರಯ ಪತ್ರದ ಮೇರೆಗೆ ಎಂ ಇ ನಂ. 620 ಮಂಜೂರಾಗಿದೆ ಅಂದ್ರೆ ಸರಿಯಲ್ಲಾ.

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲಾ. ನಾನು ಬೇರೆಯವರಿಂದ ಓದಿಸಿ ನೋಡಿ ತಿಳಿದುಕೊಳ್ಳುತ್ತೇನೆ. ನಾನು ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿನ ವಿಷಯಗಳನ್ನು ನಿಮ್ಮಂತಹವರಿಂದ ಓದಿಸಿ ನೋಡಿ ತಿಳಿದುಕೊಳ್ಳುತ್ತೇನೆ. ನಾನು ನನ್ನ ಮಕ್ಕಳಿಂದ

ಓದಿಸಿ ನೋಡಿ ತಿಳಿದುಕೊಂಡಿದ್ದೇನೆ. ಅಸಲು ದಾವಾ ನಂ.118/2001 ರ ಬಗ್ಗೆ ನನ್ನ ಮಕ್ಕಳಿಂದ ಓದಿಸಿ ನೋಡಿ ತಿಳಿದುಕೊಂಡಿದ್ದೇನೆ. ಯಾವಾಗ ಓದಿಸಿ ನೋಡಿ ತಿಳಿದುಕೊಂಡಿದ್ದೇನೆ ಅಂತಾ ನನಗೀಗ ನೆನಪಿರುವುದಿಲ್ಲಾ. ನಾನು 15-20 ವರ್ಷಗಳ ಹಿಂದೆ ಆ ದಾವೆಯ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲಾ. 7-8 ವರ್ಷಗಳಾಗಿರಬಹುದು. ದಾವಾ ಆಸ್ತಿಯು ನಮ್ಮ ತಂದೆಗೆ ವಿಭಾಗದ ಮೂಲಕ ಬಂದಿರುತ್ತದೆ. ನಾನು ವಿಭಾಗ ಪತ್ರವನ್ನು ನೋಡಿರುವುದಿಲ್ಲಾ ವಿಭಾಗ ಪತ್ರವನ್ನು ಓದಿಸಿ ತಿಳಿದುಕೊಳ್ಳಲು ಪ್ರಯತ್ನಪಟ್ಟಿರುವುದಿಲ್ಲಾ ವಿಭಾಗ ಪತ್ರದಲ್ಲಿ 26 ಗುಂಟೆಗೆ ಯಾವ ದಿಕ್ಕಿನಲ್ಲಿ ಬರುತ್ತದೆ ಅಂತಾ ನಾನು ಓದಿಸಿ ತಿಳಿದುಕೊಂಡಿಲ್ಲಾ. ಓದಿಸಿ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇಲ್ಲಾ. ನಿಪಿ-5 ಮ್ಯುಟೇಷನ್ ಪ್ರತಿಯಲ್ಲಿ 26 ಗುಂಟೆ ಯಾವ ದಿಕ್ಕಿನಲ್ಲಿ ಇದೆ ಅಂತಾ ನಮೂದಾಗಿಲ್ಲಾ ಅಂದ್ರೆ ಸಾಕ್ಷಿಯು ದಕ್ಷಿಣ ದಿಕ್ಕಿನಲ್ಲಿ ಬಂದಿರುತ್ತದೆ ಅನ್ನುತ್ತಾರೆ. ನಾನು ನಿಪಿ-5 ನ್ನು ಓದಿಸಿ ತಿಳಿದುಕೊಂಡಿಲ್ಲಾ. ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆ ಗಳನ್ನು ಓದಿಸಿ ತಿಳಿದುಕೊಂಡಿಲ್ಲಾ. ದಾವಾ ಆಸ್ತಿಯಲ್ಲಿ ನನ್ನ ತಂದೆಗೆ ದಕ್ಷಿಣದ ಕಡೆಗೆ ಬಂದಿರುತ್ತದೆ. ಶಂಕ್ರಪ್ಪ ಮತ್ತು ಫಕ್ಕೀರಪ್ಪ ಎನ್ನುವವರಿಗೆ ಉತ್ತರದ ಕಡೆಗೆ ಬಂದಿರುತ್ತದೆ ನಿಪಿ-5 ರಲ್ಲಿ ನಮ್ಮ ತಂದೆ ಮತ್ತು ಆತನ ಸಹೋದರರಿಗೆ ಸಾಮೂಹಿಕವಾಗಿ ಎಂದು ನಮೂದಿಸಿದ್ದಾರೆ ಅಂದ್ರೆ ಸಾಕ್ಷಿಯು ಪ್ರತಿವಾದಿಯರು ನಮಗೆ ಗೊತ್ತಾಗದಂತೆ ನಮೂದಿಸಿಕೊಂಡಿದ್ದಾರೆ ಅನ್ನತ್ತಾರೆ. ನಾನು ನಿಪಿ-5 ನ್ನು ಪ್ರಶ್ನಿಸಿರುವುದಿಲ್ಲಾ. ನಾನು ಸಲ್ಲಿಸಿದ ದಾವೆಯಲ್ಲಿ ಮೂಕಪ್ಪ ಕ್ಷೌರದ ಎನ್ನುವವರು ಮಾತ್ರ ಸಾಕ್ಷಿ ನುಡಿದಿರುತ್ತಾರೆ ಅಂದ್ರೆ ನನಗೆ ಗೊತ್ತಿಲ್ಲಾ. ಮೂಕಪ್ಪ ಕ್ಷೌರದ ಎನ್ನುವವರು ತಮ್ಮ ಪ್ರಮಾಣಪತ್ರದಲ್ಲಿ 1970 ರಲ್ಲಿ ವಿಭಾಗ ಆಗಿ ಅವರವರ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ವಹಿವಾಟಿಯಲ್ಲಿದ್ದಾರೆ ಅಂದ್ರೆ ಸಾಕ್ಷಿಯು ನಾವು ಭಾಗ ಮಾಡಿಕೊಂಡಿದ್ದೇವೆ ಅನ್ನುತ್ತಾರೆ. 1970 ರ ನಂತರ ನನ್ನ ತಂದೆಯ ಸಹೋದರರು ಕುಟುಂಬದಲ್ಲಿ ಆಸ್ತಿ ಮಾರಾಟ ಮಾಡುವ ಬಗ್ಗೆ ಮತ್ತು ಆಸ್ತಿಗಳನ್ನು ಅದಲು ಬದಲು

ಮಾಡಿಕೊಳ್ಳುವ ಬಗ್ಗೆ ಹೊಂದಾಣಿಕೆ ಮಾಡಿಕೊಂಡಿದ್ದರು ಅಂದ್ರೆ ಸರಿಯಲ್ಲಾ. ದಾವಾ ಆಸ್ತಿಯು ನಮ್ಮ ಊರಿಗೆ ಹೊಂದಿಕೊಂಡಿದೆ ಅಂದ್ರೆ ನಿಜ. ಸದರಿ ಜಮೀನು ಮನೆ ಕಟ್ಟಿಕೊಂಡು ವಾಸ ಮಾಡಲು ಯೋಗ್ಯವಾಗಿದೆ ಅಂದ್ರೆ ನಿಜ. ದಾವಾ ಆಸ್ತಿಯಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಇದೆ ಅಂದ್ರೆ ಸಾಕ್ಷಿಯು ಫಕ್ಕೀರಪ್ಪನ ಹಿಸ್ಸೆಗೆ ಹೋದ ಜಮೀನಿನಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಇದೆ ಅನ್ನುತ್ತಾರೆ. ಫಕ್ಕೀರಪ್ಪನಿಗೆ ಮತ್ತು ಶಂಕ್ರಪ್ಪನಿಗೆ ನಮ್ಮ ತಂದೆಯ ಭಾಗಕ್ಕೆ ಬಂದ ಜಮೀನಿನಷ್ಟೇ ಜಮೀನು ಬಂದಿರುತ್ತದೆ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಭಾಗ ಬಂದಿರುವುದಿಲ್ಲಾ, ಬೇರೆ ನೀರಾವರಿ ಜಮೀನಿನಲ್ಲಿ ಭಾಗ ಬಂದಿರುತ್ತದೆ. 1 ನೇ ಪ್ರತಿವಾದಿಯ ವಾರಸುದಾರರಿಗೆ ದಾವಾ ಸರ್ವೆ ನಂಬರಿನಲ್ಲಿ 38 ಗುಟೆ ಬಂದಿದೆ ಎಂದು ಪಹಣಿ ಪತ್ರಿಕೆಯಲ್ಲಿ ನಮೂದಾಗಿದೆ ಅಂದ್ರೆ ಸಾಕ್ಷಿಯು ನಮಗೆ ಗೊತ್ತಾಗದಂತೆ ಮಾಡಿಕೊಂಡಿದ್ದಾರೆ ಅನ್ನುತ್ತಾರೆ. ಸದರಿ ಸಂಗತಿಯು ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ತೊಂದರೆ ಮಾಡಿದಾಗ ನನಗೆ ಗೊತ್ತಾಗಿರುತ್ತದೆ. 15 ವರ್ಷಗಳಿಂದಲೂ ತೊಂದರೆ ಮಾಡುತ್ತಿದ್ದಾರೆ. ಆ ಬಗ್ಗೆ ನಾನು ಕಾನೂನು ಕ್ರಮ ಕೈಕೊಂಡಿದ್ದೀರಾ ಅಂದ್ರೆ ಸಾಕ್ಷಿಯು ಬಗ್ಗೆ 7–8 ವರ್ಷಗಳ ಹಿಂದೆ ನಮ್ಮ ವಕೀಲರಿಗೆ ಬಂದು ತಿಳಿಸಿದ್ದೇನೆ. 4 ಮತ್ತು 5 ನೇ ಪ್ರತಿವಾದಿಯರು ನಮ್ಮ ಊರಿನವರು ಇರುತ್ತಾರೆ. 4 ಮತ್ತು 5 ನೇ ಪ್ರತಿವಾದಿಯರು 4 ಮತ್ತು 5 ಗುಂಟಾ ಜಮೀನಿನಲ್ಲಿ ಕಬ್ಜಾ ವಹಿವಾಟಿ ಹೊಂದಿದ್ದಾರೆ ಅಂದ್ರೆ ಸಾಕ್ಷಿಯು ಫಕ್ಕೀರಪ್ಪನ ಹಿಸ್ಸೆಯಲ್ಲಿ ಖರೀದಿಸಿ ಸ್ವಾಧೀನದಲ್ಲಿ ಇದ್ದಾರೆ ಅನ್ನುತ್ತಾರೆ. ನನ್ನ 26 ಗುಂಟೆಯಲ್ಲಿ ನಾನೇ ಕಬ್ಜೆ ಹೊಂದಿ ವಹಿವಾಟು ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ